# ತಾರತಮ್ಯ ಮತ್ತು ಹೊರಗಿಡುವಿಕೆಯ ನಿವಾರಣೆ

## | 'ಸದ್ಭಾವನಾ ವಿದ್ಯಾಲಯ' ದೆಡೆಗೆ

ಸಾವಿತ್ರಿ ಸಾಹು

ಶಾಲೆಯು ಮಕ್ಕಳಿಗೆ ಸಾಂವಿಧಾನಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಹಾಯ ಮಾಡುವ, ಆ ಬಗ್ಗೆ ಅರಿವು ಮೂಡಿಸುವ ಸಂಸ್ಥೆಯಾಗಿದೆ. ಮಕ್ಕಳಲ್ಲಿ ಕಲಿಕೆಯನ್ನು ವರ್ಧಿಸಲು, ಮಕ್ಕಳು, ಪ್ರಸ್ತುತ ಸಂದರ್ಭದಲ್ಲಿ ಮತ್ತು ಬೆಳವಣಿಗೆ ಹೊಂದುವ ಸಮಯದಲ್ಲೂ ಪ್ರಗತಿ ಹೊಂದಲು ಸಹಾಯ ಮಾಡಲು, ಶಾಲೆಗಳು ಸಹಾನುಭೂತಿ ಮತ್ತು ಸಮಾನತೆಯ ವಾತಾವರಣವನ್ನು ಸೃಷ್ಟಿಸಬೇಕು. ತರಗತಿ ಕೊಠಡಿ, ಆಟದ ಮೈದಾನ ಮತ್ತು ದೈನಂದಿನ ಬೆಳಗ್ಗಿನ ಶಾಲಾ ಸಭೆಯಲ್ಲಿನ ವಿವಿಧ ಚಟುವಟಿಕೆಗಳಲ್ಲಿ ಮಕ್ಕಳನ್ನು ಸೇರಿಸಿಕೊಳ್ಳುವ ಮೂಲಕ ಅವರ ಸ್ವತಂತ್ರ ಆಲೋಚನೆಗಳು ಮತ್ತು ಅಭಿಪ್ರಾಯಗಳನ್ನು ಗೌರವಿಸುವುದು ಶಾಲೆಯಲ್ಲಿ ಮಕ್ಕಳನ್ನು ಸಮಾನವಾಗಿ ಪರಿಗಣಿಸುವುದನ್ನು ಖಚಿತಪಡಿಸಿಕೊಳ್ಳಲು ಇರುವ ಪ್ರಮುಖ ಮಾರ್ಗಗಳಲ್ಲಿ ಒಂದಾಗಿದೆ. ಶಾಲೆಯು ಮಕ್ಕಳ ನಡವಳಿಕೆಯಲ್ಲಿ ಮಾರ್ಪಾಡುಗಳನ್ನು ತರುತ್ತದೆ ಮತ್ತು ಉತ್ತಮ ಭವಿಷ್ಯವನ್ನು ನಿರ್ಮಿಸಿಕೊಳ್ಳಲು ಅವರನ್ನು ಸಿದ್ಧಪಡಿಸುತ್ತದೆ, ಸಮಾಜದ ಬಗ್ಗೆ ಯೋಚಿಸುವಂತೆಯೂ ಪ್ರೇರೇಪಿಸುತ್ತದೆ. ಶಾಲೆಗೆ ಬರುವ ಮಕ್ಕಳಲ್ಲಿ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಜನಾಂಗೀಯ ಹಿನ್ನೆಲೆಗಳಲ್ಲಿ ವೈವಿಧ್ಯತೆ ಹಾಗೂ ಸಂಪ್ರದಾಯ ಮತ್ತು ಸಿದ್ಧಾಂತಗಳಲ್ಲಿನ ವ್ಯತ್ಯಾಸಗಳನ್ನು ನಾವು ನೋಡುತ್ತೇವೆ. ಶಾಲೆಯಲ್ಲಿ ಮಕ್ಕಳ ನಡವಳಿಕೆಯು ಅವರ ಕೌಟುಂಬಿಕ ಮತ್ತು ಸಾಮಾಜಿಕ ಹಿನ್ನೆಲೆಗಳಲ್ಲಿರುವ ವ್ಯತ್ಯಾಸಗಳನ್ನು ಪ್ರತಿ-ಬಿಂಬಿಸುತ್ತದೆ. ಈ ನಡವಳಿಕೆಗಳ ಪರಿಣಾಮದಿಂದಾಗಿ ಮಕ್ಕಳಲ್ಲಿ ಶೈಕ್ಷಣಿಕ ಪ್ರಗತಿಯಾಗದಂತೆ ತಡೆಯುವ ಕಾರಣಗಳಿದ್ದರೆ ಅವುಗಳನ್ನು ಗುರುತಿಸಬೇಕು ಮತ್ತು ತರಗತಿಯಲ್ಲಿ ಹಾಗೂ ತರಗತಿಯ ಹೊರಗೆ ಅವನ್ನು ಚರ್ಚಿಸಬೇಕು.

ಸಾಮಾಜಿಕವಾಗಿ, ದೈಹಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಜನಾಂಗೀಯವಾಗಿ ವೈವಿಧ್ಯ-ಮಯವಾದ ತರಗತಿಗಳಲ್ಲಿ ಮಕ್ಕಳೊಂದಿಗೆ ಕೆಲಸ ಮಾಡಲು ನನಗೆ ಅವಕಾಶ ಸಿಕ್ಕಿದೆ. ಆದರೆ ಸಮನ್ವಯತೆಯನ್ನು ಸಾಧಿಸಲು ಇಲ್ಲಿ ಅಡೆತಡೆಗಳಿವೆ, ಮತ್ತು ನಾನು ಅದನ್ನು ವೈಯಕ್ತಿಕವಾಗಿ ಅನುಭವಿಸಿದ್ದೇನೆ. ಈ ಲೇಖನದಲ್ಲಿ, ನನ್ನ ಅನುಭವಗಳನ್ನು ಮತ್ತು ಲಿಂಗ, ಜಾತಿ, ವರ್ಗ, ಧರ್ಮ ಮತ್ತು ಇತರ ವ್ಯತ್ಯಾಸಗಳ ಬಗ್ಗೆ ಸಾಮಾನ್ಯವಾಗಿ ಇರುವ ತಪ್ಪು ಕಲ್ಪನೆಗಳಿಂದ ಹೊರಬಂದು, ಮಕ್ಕಳು ಅದರ ಹೊರತಾಗಿಯೂ ಬೆಳೆಯಲು ಸಹಾಯ ಮಾಡಲು ನಾನು ತೆಗೆದುಕೊಂಡ ಕ್ರಮಗಳನ್ನು ಹಂಚಿಕೊಳ್ಳಲು ನಾನು ಬಯಸುತ್ತೇನೆ.

### ಲಿಂಗ ಪ್ರತ್ಯೇಕತೆ

ನನ್ನ ತರಗತಿಯಲ್ಲಿ ಮತ್ತು ಶಾಲೆಗಳಲ್ಲಿ ನಾನು ಎದುರಿಸಿದ ಮೊದಲ ಸವಾಲು, ಸರ್ವೇಸಾಮಾನ್ಯವಾಗಿರುವ ಲಿಂಗ ತಾರತಮ್ಯ (gender discrimination). ಮಕ್ಕಳಿಗೆ ಇದರ ಬಗ್ಗೆ ಅರಿವಿರದಿದ್ದರೂ ಮತ್ತು ನಾವು ಶಿಕ್ಷಕರು ಅದನ್ನು ಒಪ್ಪಿಕೊಳ್ಳದಿದ್ದರೂ, ಲಿಂಗ ಆಧಾರಿತ ಪ್ರತ್ಯೇಕತೆಯು (gender-based segregation) ನಮ್ಮ ಸುತ್ತಲೂ ಇದೆ. ನಾನು ತರಗತಿಯಲ್ಲಿ ವಿವಿಧ ವಿಷಯಗಳನ್ನು ಬೋಧಿಸುತ್ತಿರುವಾಗ, ವಿದ್ಯಾರ್ಥಿಗಳು ಗುಂಪುಗಳಲ್ಲಿ ಕೆಲಸ ಮಾಡಬೇಕಾದ ಸಂದರ್ಭ ಒದಗಿದಾಗ ಸಾಮಾನ್ಯವಾಗಿ ಹುಡುಗರು ತಮ್ಮ ಗುಂಪಿಗೆ ಹುಡುಗರನ್ನು ಮತ್ತು ಹುಡುಗಿಯರು ಹುಡುಗಿಯರನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತಾರೆ ಎಂದು ನಾನು ಗಮನಿಸಿದ್ದೇನೆ. ಅವರು ಒಟ್ಟಿಗೆ ಕುಳಿತುಕೊಳ್ಳುವಾಗ, ಮಾತನಾಡುವಾಗ, ಜೋಡಿಯಾಗಿ ಓದುವಾಗ ಮತ್ತು ಹೊರಾಂಗಣ ಆಟೋಟದಲ್ಲಿ ಅದೇ ನಡವಳಿಕೆಯನ್ನು ನಾವು ಗಮನಿಸಬಹುದು. ಹುಡುಗರು ಮತ್ತು ಹುಡುಗಿಯರು ಇಬ್ಬರೂ ತಮ್ಮ ವೈಯಕ್ತಿಕ ವಸ್ತುಗಳನ್ನು, ಪೆನ್ನುಗಳು ಮತ್ತು ಬಳಪಗಳನ್ನು ಪರಸ್ಪರ ಹಂಚಿಕೊಳ್ಳುತ್ತಿರಲಿಲ್ಲ. ಮಕ್ಕಳಲ್ಲಿ ಇಂತಹ ನಡವಳಿಕೆಯು ಸಮನ್ವಯ ಸಮಾಜ (inclusive society) ನಿರ್ಮಾಣಕ್ಕೆ ತಡೆಯಾಗಿದೆ ಎಂದು ನಾನು ಭಾವಿಸುತ್ತೇನೆ, ಆದ್ದರಿಂದ ನಾನು ನನ್ನ ತರಗತಿಯಲ್ಲಿ ಸಂವಾದ-ಸ್ನೇಹಿ (dialogue friendly) ವಾತಾವರಣವನ್ನು ಸ್ಥಾಪಿಸಿದೆ. ಉದಾಹರಣೆಗೆ, ಅವರ ತರಗತಿಯ ನೀಲಂ ಅತ್ಯಂತ ಪ್ರತಿಭಾವಂತ ನೃತ್ಯಗಾರ್ತಿ ಮತ್ತು ಕಲಾವಿದೆ, ಅವಳಿಂದ ಈ ಕೌಶಲಗಳನ್ನು ಅವರು ಕಲಿಯಲು ಇಷ್ಟಪಡುವುದಿಲ್ಲವೇ? ಎಂದು ಕೇಳಿದೆ. ಅದೇ ರೀತಿ ವೇದಿಕಾ ಮತ್ತು ದೀಕ್ಷಾ ಸುಂದರ ಹಾಡುಗಳು ಮತ್ತು ಕಥೆಗಳನ್ನು ಬರೆಯುತ್ತಾರೆ; ನಿಮಗೆ ಇದನ್ನು ಅವರಿಂದ ಕಲಿಯಲು ಆಸಕ್ತಿ ಇಲ್ಲವೇ? ಆ ದೇವರಾಜ್ ಕ್ರೀಡೆಯಲ್ಲಿ ಪ್ರತಿಭಾವಂತ, ಇತರರನ್ನು ಭಾಗವಹಿಸಲು ಪ್ರೇರೇಪಿಸುತ್ತಾನೆ; ಅವರು ಅವನೊಂದಿಗೆ ಆಡಲು ಬಯಸುವುದಿಲ್ಲವೇ? ಹೀಗೆ ನಾನು ಅವರ ತರಗತಿಯಲ್ಲಿನ ಪ್ರತಿಯೊಬ್ಬರ ವಿಶೇಷತೆಗಳನ್ನು ಅವರಿಗೆ ಹೇಳಿದೆ. ನಂತರ ನಾವು ಸಹಪಾಠಿಗಳಿಂದ ಕಲಿಯುವಾಗ ಎದುರಾಗುವ ಸವಾಲುಗಳನ್ನು ಮತ್ತು ತರಗತಿಯಲ್ಲಿ ಪರಸ್ಪರ ಸಹಾಯ ಪಡೆಯುವುದು ಹೇಗೆ ಎಂಬುದರ ಕುರಿತಾಗಿ ಚರ್ಚಿಸಿದೆವು. ನಾನು ಮಕ್ಕಳನ್ನು ಒಬ್ಬರಿಗೊಬ್ಬರು ಸಹಕರಿಸಲು ಪ್ರೋತ್ಸಾಹಿಸಿದೆ ಮತ್ತು ಹುಡುಗರು ಮತ್ತು ಹುಡುಗಿಯರು ಇಬ್ಬರೂ ಸ್ನೇಹಿತರಾಗಬಹುದು ಎಂದು ಒತ್ತಿ ಹೇಳಿದೆ. ಹುಡುಗ ಹುಡುಗಿಯರಿಬ್ಬರೂ ಕಸ ಗುಡಿಸುವುದು, ನೀರು ತರುವುದು

ಮತ್ತು ಪಾತ್ರೆಗಳನ್ನು ತೊಳೆಯುವುದು ಮುಂತಾದ ಮನೆಕೆಲಸಗಳಲ್ಲಿ ತಮ್ಮ ತಾಯಂದಿರಿಗೆ ಮತ್ತು ತೋಟದ ಕೆಲಸ ಮಾಡುವಲ್ಲಿ ಮತ್ತು ದಿನಸಿ ಸಾಮಾನುಗಳನ್ನು ಮನೆಗೆ ತರಲು – ಅವರ ತಂದೆಗೆ ಹೇಗೆ ಸಹಾಯ ಮಾಡುತ್ತಾರೆ ಮತ್ತು ಈ ಕೆಲಸಗಳನ್ನು ಮಾಡಿ ಯಾವ ರೀತಿ ಅವರ ಪೋಷಕರಿಗೆ ಸಹಕರಿಸುತ್ತಾರೆ ಎಂಬುದನ್ನು ನಾನು ಅವರಿಗೆ ವಿವರಿಸಿ ಹೇಳಿದೆ. ಅವರು ಹುಡುಗರಾಗಿರಲಿ ಅಥವಾ ಹುಡುಗಿಯರಾಗಿರಲಿ, ಅವರೆಲ್ಲರೂ ಆಟವಾಡಲು, ಓದಲು, ಬರೆಯಲು, ಪ್ರವಾಸ ಮಾಡಲು ಮತ್ತು ಆನಂದಿಸಲು ಬಯಸುತ್ತಾರೆ; ದೈಹಿಕ ವ್ಯತ್ಯಾಸಗಳನ್ನು ಹೊರತುಪಡಿಸಿ, ಹುಡುಗಿ ಮತ್ತು ಹುಡುಗನ ನಡುವೆ ಯಾವುದೇ ವ್ಯತ್ಯಾಸಗಳಿಲ್ಲ ಎಂಬುದನ್ನು ನಾನು ಅವರಿಗೆ ಅರ್ಥ ಮಾಡಿಸಿದೆ.

ಒಟ್ಟಿಗೆ ಕೆಲಸ ಮಾಡುವ ಮೌಲ್ಯವನ್ನು ಅವರಿಗೆ ಕಲಿಸಲು ನಾನು ಮಕ್ಕಳನ್ನು ವೃತ್ತಾಕಾರದಲ್ಲಿ ಒಬ್ಬ ಹುಡುಗ, ಒಬ್ಬಳು ಹುಡುಗಿಯಂತೆ ಕುಳಿತುಕೊಳ್ಳುವಂತೆ ಮಾಡಿದ್ದೇನೆ. ಗುಂಪು–ಗಳನ್ನು ರಚಿಸುವಾಗಲೂ, ನಾವು ಇದನ್ನು ಮನಸ್ಸಿನಲ್ಲಿಟ್ಟು–ಕೊಳ್ಳುತ್ತೇವೆ. ಇಂದು, ನನ್ನ ತರಗತಿಯಲ್ಲಿ ಯಾವುದೇ ಲಿಂಗ ಪ್ರತ್ಯೇಕತೆ ಇಲ್ಲ; ಮಕ್ಕಳು ಒಟ್ಟಿಗೆ ಆಡುತ್ತಾರೆ ಮತ್ತು ಪರಸ್ಪರ ಸಹಾನುಭೂತಿ ತೋರಿಸುತ್ತಾರೆ. ನಾನು ತರಬೇತಿ ಕಾರ್ಯಕ್ರಮಗಳಿಂದ ಅಥವಾ ಇನ್ನಾವುದೇ ಕೆಲಸದಿಂದ ತರಗತಿಗೆ ಹಿಂದಿರುಗಿದಾಗ, ವಿದ್ಯಾರ್ಥಿಗಳು ನನ್ನ ಅನುಪಸ್ಥಿತಿಯಲ್ಲಿ ಪರಸ್ಪರ ಕಲಿಸಿದ, ಕಲಿತ ಅನುಭವಗಳ ಬಗ್ಗೆ ನನಗೆ ಹೇಳುತ್ತಾರೆ. ನಾನು ಒಮ್ಮೆ ಅರ್ಧ ದಿನ ಶಾಲೆಯಲ್ಲಿರಲಿಲ್ಲ. ಮರುದಿನ ವಾಪಸ್ಸು ಬಂದಾಗ ಹರೀಶ್ ಗಾಯಗೊಂಡಿರುವುದು ಗೊತ್ತಾಯಿತು. ಅದು ಇತರ ಎಲ್ಲಾ ಮಕ್ಕಳಿಗೆ ಚಿಂತೆಗೆ ಪ್ರಮುಖ ಕಾರಣವಾಯಿತು. ಆದ್ದರಿಂದ, ನಾವು ಅವನನ್ನು ಭೇಟಿ ಮಾಡಲು ಹೋದೆವು. ಹರೀಶ್ ಗುಣಮುಖನಾಗುತ್ತಿರುವುದನ್ನು ಕಂಡು ಮಕ್ಕಳು ಸಂತಸಪಟ್ಟರು. ಅವನು ಸುರಕ್ಷಿತವಾಗಿರಲು ಮತ್ತು ತ್ವರಿತವಾಗಿ ಚೇತರಿಸಿಕೊಳ್ಳಲು ಏನು ಮಾಡಬೇಕು ಎಂದು ಎಲ್ಲರೂ ಸಲಹೆ ನೀಡಿದರು. ನಾವು ಹರೀಶ್ ಅವರ ಪೋಷಕರ ಬಳಿಯೂ ಮಾತನಾಡಿದೆವು, ಅವರು ಸಂತೋಷಪಟ್ಟರು.

ಮಕ್ಕಳು ತಮ್ಮ ಸಹಪಾಠಿಯ ಬಗ್ಗೆ ಕಾಳಜಿಯನ್ನು ತೋರಿಸುವುದನ್ನು ಕಂಡು ನಾನು ಆನಂದಿಸಿದೆ ಮತ್ತು ಪ್ರಶಂಸಿಸಿದೆ. ಏಕೆಂದರೆ ಅವರಲ್ಲಿ ಮಾನವೀಯ ಮೌಲ್ಯಗಳು ತುಂಬಿರುವುದನ್ನು ನಾನು ನೋಡಿದೆ, ಅದು ಲಿಂಗಬೇಧವನ್ನು ಲೆಕ್ಕಿಸದೆ ಅತ್ಯುತ್ತಮ ನಾಗರಿಕರಾಗಿ ಬೆಳೆಯಲು ಅವರನ್ನು ಸಶಕ್ತರನ್ನಾಗಿ ಮಾಡಬಲ್ಲದು.

## ಆರ್ಥಿಕ ಅಸಮಾನತೆ

ಶ್ರೀಮಂತ ಮತ್ತು ಬಡ ಕುಟುಂಬಗಳ ನಡುವಿನ ಅಸಮಾನತೆಯು ನನ್ನ ತರಗತಿಯಲ್ಲಿ ನಾನು ಗಮನಿಸಿದ ಮತ್ತೊಂದು ತಡೆಗೋಡೆಯಾಗಿದೆ. ಇದು ಮಕ್ಕಳ ಮೇಲೆ ಎಷ್ಟು ಪ್ರಭಾವ ಬೀರುತ್ತದೆ ಎಂದರೆ ಮಗುವೊಂದು ತನ್ನನ್ನು ಅಥವಾ ತನ್ನ ಕುಟುಂಬವನ್ನು ಯಾರೂ ಗೌರವಿಸುವುದಿಲ್ಲ, 'ನಾವು ಸ್ಥಿತಿವಂತರಲ್ಲ, ಹೀಗಾಗಿ ಯಾರೂ ನಮ್ಮನ್ನು ಭೇಟಿ ಮಾಡುತ್ತಿಲ್ಲ, ಶ್ರೀಮಂತರ ಮನೆಗೆ ಜನರು ಆಗಾಗ ಭೇಟಿ ನೀಡುತ್ತಾರೆ' ಎಂದು ಹೇಳುತ್ತಿತ್ತು. ಆದರೆ ಇದು ನಿಜವಲ್ಲ ಎಂದು ನಾನು ಮಕ್ಕಳಿಗೆ ತಿಳಿಸಿ ಹೇಳಿದೆ. 'ನಮ್ಮ ಶಾಲೆಯನ್ನು ಒಮ್ಮೆ ನೋಡಿ. ವಿವಿಧ ರೀತಿಯ ಮನೆಗಳಿಂದ ಮಕ್ಕಳು ಇಲ್ಲಿ ಓದಲು ಬರುತ್ತಾರೆ. ನಮ್ಮ ಶಾಲೆಯಲ್ಲಿ ಯಾವುದೇ ವಿದ್ಯಾರ್ಥಿ ತಾರತಮ್ಯಕ್ಕೆ ಒಳಗಾಗಿಲ್ಲ. ತರಗತಿಯಲ್ಲಿ ಎಲ್ಲರೂ ಒಂದೇ ರೀತಿಯಲ್ಲಿ ಕಲಿಯುತ್ತಾರೆ ಮತ್ತು ಮಾತನಾಡಲು ಮತ್ತು ಪ್ರಶ್ನೆಗಳನ್ನು ಕೇಳಲು ಒಂದೇ ರೀತಿಯ ಅವಕಾಶವನ್ನು ನೀಡಲಾಗುತ್ತದೆ' ಎಂದು ನಾನು ವಿವರಿಸಿದೆ. ನಂತರ, ಮಗುವಿನ ಕಲ್ಪನೆ ತಪ್ಪು ಎಂದು ಸಾಬೀತುಪಡಿಸಲು, ಕೆಲವು ದಿನಗಳ ನಂತರ, ಇತರ ವಿದ್ಯಾರ್ಥಿಗಳು ಮತ್ತು ನಾನು ಆ ಮಗುವಿನ ಮನೆಗೆ ಭೇಟಿ ನೀಡಿ ಅವರ ಕುಟುಂಬದೊಂದಿಗೆ ಸ್ವಲ್ಪ ಸಮಯ ಕಳೆದೆವು. ಮಗುವಿಗೆ ಇದರಿಂದಾಗಿ ಸಂತೋಷ–ವಾಯಿತು.

## ಜಾತಿ ಭೇದ

ಮಕ್ಕಳು ತಮ್ಮೊಳಗೆ ಜಾತಿಯ ಬಗ್ಗೆ ಮಾತನಾಡುತ್ತಾ, 'ನಾನು ಈ ಜಾತಿಗೆ ಸೇರಿದವನು, ಮತ್ತು ನೀವು ಆ ಜಾತಿಗೆ ಸೇರಿದವರು ಎಂದು ಹೇಳುವುದು ನನ್ನ ತರಗತಿಯಲ್ಲಿ ನಾನು ಗಮನಿಸಿದ ಮೂರನೇ ತಡೆಗೋಡೆ. ಮಕ್ಕಳು ಇದನ್ನು ತಮ್ಮ ಮನೆಗಳಲ್ಲಿ ಗಮನಿಸಿ ಅನುಸರಿಸುತ್ತಿರಬಹುದು ಮತ್ತು ನಿರ್ದಿಷ್ಟ ಜಾತಿಗಳ ಸದಸ್ಯರು ಮಾತ್ರ ಕಮ್ಮಾರಿಕೆ, ಕ್ಷೌರಿಕ, ಗೋಪಾಲನೆ ಮುಂತಾದ ಕೆಲವು ಕೆಲಸಗಳನ್ನು ಮಾಡುತ್ತಾರೆ ಎಂದು ಅವರು ನಂಬುತ್ತಾರೆ. ಈ ತಾರತಮ್ಯದ ವ್ಯವಸ್ಥೆಯನ್ನು ಇನ್ನೂ ಹಳ್ಳಿಗಳಲ್ಲಿ ಕಾಣಬಹುದು. ಮಕ್ಕಳು ಸಮುದಾಯದ ಇತರರ ಈ ನಡವಳಿಕೆಯನ್ನು ಗಮನಿಸುತ್ತಾರೆ ಮತ್ತು ಅದನ್ನು ಅನುಕರಿಸಲು ಪ್ರಾರಂಭಿಸುತ್ತಾರೆ.

ನಾನು ಅವರೊಂದಿಗೆ ಸಮಸ್ಯೆಯನ್ನು ಚರ್ಚಿಸಿ, 'ಯಾರಾದರೂ ನಿರ್ದಿಷ್ಟ ಜಾತಿಗೆ ಸೇರಿದವರಾಗಿದ್ದರೆ ಏನು ವ್ಯತ್ಯಾಸ? ಮೊತ್ತಮೊದಲನೆಯದಾಗಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ನಾವೆಲ್ಲರೂ ಮನುಷ್ಯರು' ಎಂದು ನಾನು ಅವರಿಗೆ ತಿಳಿಸಿದೆ. ನಾನು ಅವರಿಗೆ ಎಲ್ಲಾ ಮಾನವರು ಹೊಂದಿರುವ ಎರಡು ಕೈಗಳು, ಎರಡು ಕಾಲುಗಳು ಮತ್ತು ಇತರ ದೇಹದ ಭಾಗಗಳ ಉದಾಹರಣೆಗಳನ್ನು ನೀಡಿದೆ. ಮಕ್ಕಳು ಈ ಬಗ್ಗೆ ಯೋಚಿಸಲು ಪ್ರಾರಂಭಿಸಿದರು. 'ಛಲ ಮತ್ತು ಕೆಲಸ ಮಾಡುವ ಬಯಕೆ ಇರುವ ಯಾರಾದರೂ ಇಂದಿನ ಜಗತ್ತಿನಲ್ಲಿ ಏನು ಬೇಕಾದರೂ ಆಗಬಹುದು' ಎಂದು ನಾನು ಅವರಿಗೆ ಹೇಳಿದೆ. ನಮ್ಮ ಶಾಲೆಯಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಸಮಾನವಾಗಿ ನೋಡಲಾಗುತ್ತದೆ. ಶಾಲೆಯು ಯಾವುದೇ ಮಗುವಿನ ಜಾತಿಯ ಕುರಿತು ತಾರತಮ್ಯ ಮಾಡುವುದಿಲ್ಲ. ಎಲ್ಲಾ ಮಕ್ಕಳು ಒಟ್ಟಿಗೆ ಊಟ ಮಾಡುತ್ತಾರೆ, ಒಟ್ಟಿಗೆ ಅಧ್ಯಯನ ಮಾಡುತ್ತಾರೆ ಮತ್ತು ಒಟ್ಟಿಗೆ ಆಡುತ್ತಾರೆ. ಸಮಾಜದಲ್ಲಿ ಪ್ರತಿಯೊಬ್ಬರ ಕೆಲಸಗಳಿಗೂ ಸಮಾನ ಮೌಲ್ಯವಿದೆ ಎಂದು ಅವರು ಅರ್ಥಮಾಡಿಕೊಂಡಿದ್ದಾರೆ.

ಎಲ್ಲಾ ಕೆಲಸಗಳನ್ನು ನಾವೇ ಮಾಡಲು ಸಾಧ್ಯವಿಲ್ಲದ ಕಾರಣ, ಕಚ್ಚಾವಸ್ತುಗಳಿಂದ ವಸ್ತುಗಳನ್ನು ತಯಾರಿಸುವ ಕಮ್ಮಾರರು ಒಬ್ಬ ರೈತ ಅಥವಾ ಕುರುಬನಷ್ಟೇ ಮುಖ್ಯ. ನಮ್ಮ ಕೆಲಸವನ್ನು ಪೂರ್ಣಗೊಳಿಸಲು ಮತ್ತು ಬದುಕಲು ನಾವು ಇತರರ ಕೆಲಸವನ್ನು ಅವಲಂಬಿಸುತ್ತೇವೆ ಎಂಬುದನ್ನು ಅವರಿಗೆ ಅರ್ಥ ಮಾಡಿಸಿದೆ,

ಇಂತಹ ಹಲವು ಚರ್ಚೆಗಳ ನಂತರ ನಮ್ಮ ಶಾಲಾ ಮಕ್ಕಳಲ್ಲಿ ಜಾತಿ ಭೇದ ಕಾಣುತ್ತಿಲ್ಲ. ಮಕ್ಕಳ ಪೋಷಕರು ನಮ್ಮ ಶಾಲೆಗೆ ಭೇಟಿ ನೀಡಿದಾಗ, ಅವರೆಲ್ಲರನ್ನೂ ಸಮಾನವಾಗಿ ನೋಡಲಾಗುತ್ತದೆ. ನಾವು ಶಿಕ್ಷಕರು ಯಾರಿಗೂ ತಾರತಮ್ಯ ಮಾಡುವುದಿಲ್ಲ ಎಂಬುದನ್ನು ಇದು ತೋರಿಸುತ್ತದೆ.

## ಸಾಮಾಜಿಕ ಬಹಿಷ್ಕಾರ

ನಾನು ಸಾಮಾಜಿಕ ಬಹಿಷ್ಕಾರದ (social exclusion) ಪ್ರಕರಣವನ್ನು ಇಲ್ಲಿ ನೋಡಿದೆ. ಸಾಮಾಜಿಕ ಬಹಿಷ್ಕಾರ ಎಂದರೆ ಹಳ್ಳಿಯ ಜನರು ಕೆಲವು ಗ್ರಾಮಸ್ಥರನ್ನು ಸಮಾಜದಿಂದ ಹಳ್ಳಿಯಿಂದ ಹೊರಗಿಡುವುದು. ಈ ಹೊರಗಿಡುವಿಕೆಯು ಮಕ್ಕಳ ಮೇಲೆ ಗಮನಾರ್ಹ ಪರಿಣಾಮ ಬೀರುತ್ತದೆ, ಅವರ ಗ್ರಹಿಕೆಗಳು ಮತ್ತು ಆಲೋಚನೆಗಳನ್ನು ಬದಲಾಯಿಸುತ್ತದೆ. ಮಕ್ಕಳು ಅಂತಹ ವಿಷಯಗಳ ಬಗ್ಗೆ ಸ್ವತಃ ಯೋಚಿಸಲು ಸಾಧ್ಯವಾಗುವುದಿಲ್ಲ; ಅವರು ತಮ್ಮ ಕುಟುಂಬದ ಸದಸ್ಯರು ಮತ್ತು ಇತರ ಹಿರಿಯರನ್ನು ಗಮನಿಸುತ್ತಾರೆ ಮತ್ತು ಅವರನ್ನು ಅನುಸರಿಸಲು ಪ್ರಾರಂಭಿಸುತ್ತಾರೆ. ನನ್ನ ತರಗತಿಯ ಹುಡುಗಿ ರಾಗಿಣಿಯ ಕುಟುಂಬವನ್ನು ಸಮಾಜದಿಂದ ದೂರವಿಡಲಾಯಿತು ಮತ್ತು ಇದರ ಪರಿಣಾಮವಾಗಿ, ಇತರ ಮಕ್ಕಳೊಂದಿಗೆ, ಅವಳ ನೆರೆಹೊರೆಯ ಮತ್ತು ನಮ್ಮ ತರಗತಿಯಲ್ಲಿಯೇ ಓದುವ ಆಕೆಯ ಉತ್ತಮ ಸ್ನೇಹಿತೆ ಈ ಮೊದಲು ಪೆನ್ನುಗಳು, ನೋಟುಬುಕ್‌ಗಳು ಮತ್ತು ಬಣ್ಣದ ಪೆನ್ಸಿಲ್‌ಗಳು ಇತ್ಯಾದಿ ವಸ್ತುಗಳನ್ನು ಹಂಚಿಕೊಳ್ಳುತ್ತಿದ್ದವಳು, ಇವುಗಳನ್ನು ಅವಳೊಂದಿಗೆ ಹಂಚಿಕೊಳ್ಳುವುದನ್ನು ನಿಲ್ಲಿಸಿದಳು; ಅವಳೊಂದಿಗೆ ಆಟವಾಡುವುದನ್ನು, ಓದುವುದನ್ನು ಮತ್ತು ಅವಳೊಂದಿಗೆ ಕುಳಿತುಕೊಳ್ಳುವುದನ್ನು ನಿಲ್ಲಿಸಿದಳು. ಅವರು ಯಾಕೆ ಹೀಗೆ ವರ್ತಿಸುತ್ತಿದ್ದಾರೆ ಎಂದು ನಾನು ಮಕ್ಕಳನ್ನು ಕೇಳಿದೆ. ರಾಗಿಣಿಯ ಕುಟುಂಬವನ್ನು ಹಳ್ಳಿಯಲ್ಲಿ ಬಹಿಷ್ಕರಿಸಲಾಗಿದೆ ಮತ್ತು ಅವರು ಹಳ್ಳಿಯಲ್ಲಿ ಬೇರೆಯವರನ್ನು ಭೇಟಿ ಮಾಡುವುದನ್ನು ಅಥವಾ ಬೇರೆಯವರೊಂದಿಗೂ ಮಾತನಾಡುವುದನ್ನು ನಿಷೇಧಿಸಲಾಗಿದೆ ಎಂದು ನಾನು ಅವರಿಂದ ತಿಳಿದುಕೊಂಡೆ. ಇದು ನನಗೆ ಸಂಪೂರ್ಣ ಆಘಾತವನ್ನುಂಟು ಮಾಡಿತು, ನಾನು ಅವರು ಮಾಡುತ್ತಿರುವುದು ತಪ್ಪು ಎಂದು ಮಕ್ಕಳಿಗೆ ತಿಳಿಹೇಳಿದೆ. 'ನೋಡಿ ರಾಗಿಣಿ ನಮ್ಮ ಶಾಲೆಗೆ ಓದಲು ಬರುತ್ತಿದ್ದಾಳೆ. ನಾವು ಆಕೆಗೆ ಯಾವುದೇ ರೀತಿಯ ತಾರತಮ್ಯ ಮಾಡುತ್ತಿಲ್ಲ. ನಾವು ಅವಳನ್ನು ಓದುವಾಗ, ಬರೆಯುವಾಗ ಮತ್ತು ಆಟವಾಡುವಾಗ ಇತರ ಮಕ್ಕಳೊಂದಿಗೆ ಕೂರಿಸುತ್ತೇವೆ. ಅವರು ಒಟ್ಟಿಗೆ ಊಟ ಮಾಡುತ್ತಾರೆ, ಅವಳ ಮಾತನ್ನು ಕೇಳುತ್ತಾರೆ ಮತ್ತು ಪ್ರತಿಕ್ರಿಯಿಸುತ್ತಾರೆ. ಅವಳೂ ಮನುಷ್ಯಳೇ. ಮಾನವೀಯ ಮೌಲ್ಯಗಳನ್ನು ಗಮನದಲ್ಲಿಟ್ಟುಕೊಂಡು ನಾವು ಅವಳನ್ನು ಪ್ರೀತಿ ಮತ್ತು ಗೌರವದಿಂದ ನಡೆಸಿಕೊಳ್ಳಬೇಕು. ಯಾರಾದರೂ ನಿಮ್ಮನ್ನು ಹೀಗೆ ನಡೆಸಿಕೊಂಡರೆ ನಿಮಗೆ ಹೇಗನಿಸುತ್ತದೆ?' ಎಂದು ನಾನು ಮಕ್ಕಳಿಗೆ ಕೇಳಿದೆ. ಮಕ್ಕಳು ಅರ್ಥ ಮಾಡಿಕೊಂಡು ಮತ್ತೆ ರಾಗಿಣಿ ಜೊತೆ ಸ್ನೇಹ ಬೆಳೆಸಿದರು. ಒಂದು ದಿನ ಇಡೀ ತರಗತಿಯ ಮಕ್ಕಳೊಂದಿಗೆ ರಾಗಿಣಿಯವರ ಮನೆಗೆ ಹೋಗಿದ್ದೆವು. ನಾವು ಅವಳ ಹೆತ್ತವರೊಂದಿಗೆ ಹರಟೆ ಹೊಡೆದೆವು ಮತ್ತು ಚಹಾ ಸೇವಿಸಿದೆವು. ಸಾಮಾಜಿಕ ಬಹಿಷ್ಕಾರಕ್ಕೆ ನಮ್ಮ ನಿರಾಕರಣೆಯನ್ನು ಒತ್ತಿಹೇಳಲು, ನಾವು ಹಳ್ಳಿಯ ಮತ್ತೊಂದು ಬಹಿಷ್ಕೃತ ಕುಟುಂಬದ ಮನೆಯಿಂದ ಶಿಕ್ಷಕರ ಚಹಾಕ್ಕಾಗಿ ಹಾಲು ತರಲು ಮಕ್ಕಳಿಗೆ ಹೇಳಿದೆವು. ಮೊದಮೊದಲು ಹಿಂದೇಟು ಹಾಕುತ್ತಿದ್ದ ಅವರು ಈಗ ಆ ಕುಟುಂಬದಿಂದ ಶಾಲೆಗೆ ನಿತ್ಯ ಹಾಲು ತರುತ್ತಾರೆ. ಈ ಎಲ್ಲಾ ಘಟನೆಗಳು ಮಕ್ಕಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು, ಅವರ ಸಾಮಾಜಿಕ ಮತ್ತು ಆರ್ಥಿಕ ಸಿದ್ಧಾಂತಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ತಾರತಮ್ಯವನ್ನು ಸೃಷ್ಟಿಸುವ ಸಾಮಾಜಿಕ ವರ್ತನೆಗಳನ್ನು ಪರಿಗಣಿಸಲು ನನಗೆ ಉತ್ತಮ ಅವಕಾಶವನ್ನು ಒದಗಿಸಿವೆ. ಸಮಾಜದಲ್ಲಿನ ಪ್ರತ್ಯೇಕತೆಯು ಮಕ್ಕಳಲ್ಲಿ ಅಧೀನತೆಯ ಭಾವವನ್ನು ಉಂಟು ಮಾಡುತ್ತದೆ ಮತ್ತು ಸ್ವತಂತ್ರವಾಗಿ ಯೋಚಿಸುವುದನ್ನು ತಡೆಯುತ್ತದೆ. ಪ್ರತಿಯೊಬ್ಬರ ಬೆಳವಣಿಗೆ ಮತ್ತು ಪ್ರಗತಿಯನ್ನು ಖಾತ್ರಿಪಡಿಸುವ ಕರುಣೆ, ಸಹಾನುಭೂತಿ ಮತ್ತು ಸಹಭಾಗಿತ್ವದ ಮೌಲ್ಯಗಳನ್ನು ಕಲಿಸುವುದು ಶಿಕ್ಷಕರಾದ ನಮ್ಮ ಸಾಮೂಹಿಕ ಜವಾಬ್ದಾರಿಯಾಗಿದೆ.

* ಮಕ್ಕಳ ಗುರುತನ್ನು ರಕ್ಷಿಸಲು ಹೆಸರುಗಳನ್ನು ಬದಲಾಯಿಸಲಾಗಿದೆ.



**ಸಾವಿತ್ರಿ ಸಾಹು** ಅವರು ಸರ್ಕಾರಿ ಪ್ರಾಥಮಿಕ ಶಾಲೆ ಜಾಮ್‌ಗಾಂವ್ (ಬೆಮೆತಾರಾ ಜಿಲ್ಲೆ, ಛತ್ತೀಸ್ಗಢ)ನಲ್ಲಿ ಸಹಾಯಕ ಶಿಕ್ಷಕಿಯಾಗಿದ್ದಾರೆ. ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾ ಪಡೆದಿರುವ ಸಾವಿತ್ರಿ ಅವರು, 15 ವರ್ಷಗಳ ಪ್ರಾಥಮಿಕ ಶಾಲಾ ಬೋಧನಾ ಅನುಭವವನ್ನು ಹೊಂದಿದ್ದಾರೆ. ಭಾಷೆಗಳು ಮತ್ತು ಗಣಿತ ಬೋಧನೆ ಸಾವಿತ್ರಿ ಅವರ ಆಸಕ್ತಿಯಾಗಿದ್ದು, ವಿಶೇಷವಾಗಿ ಕ್ರಿಯಾ ಸಂಶೋಧನೆಯಲ್ಲಿ (action research) ಒಲವು ಹೊಂದಿದ್ದಾರೆ. ಶಿಕ್ಷಕಿಯಾಗಿ ಅವರು ಶೈಕ್ಷಣಿಕ ಚಟುವಟಿಕೆಗಳಲ್ಲಿ ಮಕ್ಕಳಲ್ಲಿ ಆಸಕ್ತಿಯನ್ನು ಮೂಡಿಸಲು ಇಷ್ಟಪಡುತ್ತಾರೆ, ಗ್ರಾಮೀಣ ಪ್ರದೇಶಗಳಲ್ಲಿನ ಪರಿಸರದಲ್ಲಿರುವ ವಿವಿಧ ಸಾಮಾಜಿಕ ಅಡೆತಡೆಗಳನ್ನು ತೊಡೆಯಲು ಪ್ರಯತ್ನಿಸುತ್ತಾರೆ ಮತ್ತು ಚರ್ಚೆಗಳ ಮೂಲಕ ಮೌಲ್ಯಯುತ ಶಿಕ್ಷಣವನ್ನು ನೀಡುತ್ತಾರೆ. ಅವರನ್ನು savitrisahu001989@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಶ್ರೀನಿಧಿ ಅಡಿಗ** | ಪರಿಶೀಲನೆ: **ನಾಗಮಣಿ ಎಸ್. ಎನ್.**

ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಅಗತ್ಯಗಳನ್ನು ಕಲಿಕೆಯ ಪರಿಕಲ್ಪನೆಗಳು ಮತ್ತು ಫಲಿತಾಂಶಗಳಲ್ಲಿ ಸಂಯೋಜಿಸಬೇಕು. ಇದನ್ನು ಉತ್ತೇಜಿಸಲು ಹಲವಾರು ಶಿಕ್ಷಣ ಪದ್ಧತಿಗಳನ್ನು ಅಳವಡಿಸಿಕೊಳ್ಳಬಹುದು. ಇವುಗಳಲ್ಲಿ ಪ್ರಮುಖವಾದವುಗಳು ನಾಟಕ, ಕಲೆ, ಗುಂಪು ಚಟುವಟಿಕೆ, ಸಮ್ಮತಿ ಮತ್ತು ಅಸಮ್ಮತಿ ವ್ಯಕ್ತಪಡಿಸಲು ಅವಕಾಶವಿರುವ ಚಟುವಟಿಕೆಗಳು, ಜೋರಾಗಿ ಓದುವಿಕೆ, ಸಕ್ರಿಯ ಆಲಿಸುವಿಕೆ, ಮುಕ್ತ ಚರ್ಚೆಗಳು ಮತ್ತು ಸ್ವತಂತ್ರ ಬರವಣಿಗೆ. ಇಂತಹ ಚಟುವಟಿಕೆಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತವೆ.

ಚಿಕ್ಕವೀರೇಶ ಎಸ್ ವಿ, (ಪ್ರಾಜೆಕ್ಟ್ ವರ್ಕ್) ನಿಯೋಜಿತ ಕಾರ್ಯದ ಮೂಲಕ ಸಾಮಾಜಿಕ–ಭಾವನಾತ್ಮಕ ಕಲಿಕೆ, ಪು 27